# ಕರ್ನಾಟಕ ಸರ್ಕಾರ

# ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

## ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಈವರೆಗೆ ಕೈಗೊಂಡ ಯೋಜನೆಗಳ ಸಂಕ್ಷಿಪ್ತ ವರದಿ

# 1. ಅತ್ರಾಡಿ ರಾಜ್ಯ ಹೆದ್ದಾರಿ–67ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯ ಶಕ್ಯತಾ ವರದಿ ತಯಾರಿ:

## ಸದರಿ ಯೋಜನೆಯ ಪ್ರಾಮುಖ್ಯತೆ:

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಪ್ರಮುಖ ವಾಣಿಜ್ಯ ಕೇಂದ್ರಗಳಾಗುತ್ತಿದ್ದು, ಭಾರೀ ವಾಹನಗಳು ಅಧಿಕ ಸಂಖ್ಯೆಯಲ್ಲಿ ಸಂಚರಿಸುತ್ತಿದ್ದು, ಮಳೆಗಾಲದಲ್ಲಿ ಈ ಭಾಗದಲ್ಲಿ ಸುರಿಯುವ ಮಳೆಯಿಂದಾಗಿ ರಸ್ತೆಗಳು ಹದಗೆಡುತ್ತಿವೆ. ಮಂಗಳೂರು ಜಿಲ್ಲಾ ಕೇಂದ್ರವು ತೀವ್ರ ರೀತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದು, ಇಲ್ಲಿ ಅನೇಕ ಯೋಜನೆಗಳು (ವಿಶೇಷ ಆರ್ಥಿಕ ವಲಯ) ಕಾರ್ಯಗತಗೊಳ್ಳುತ್ತಿವೆ. ಇದರಿಂದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ರಾಷ್ಟ್ರೀಯ ಹೆದ್ದಾರಿಗಳಾದ 66 (ಪಣಜಿ–ಮಂಗಳೂರು), 75 (ಮಂಗಳೂರು–ಬೆಂಗಳೂರು) 13 (ಮಂಗಳೂರು–ಶೋಲಾಪುರ)ಗಳಲ್ಲಿ ವಾಹನ ದಟ್ಟಣೆಯು ಹೆಚ್ಚಾಗುತ್ತಿದ್ದು, ಇವುಗಳಿಗೆ ಪರ್ಯಾಯವಾಗಿ ಹಾಲಿ ಇರುವ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ನಾಲ್ಕು ಪಥ ರಸ್ತೆಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ. ಬಜ್ಪೆ ವಿಮಾನ ನಿಲ್ದಾಣವು ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ರೂಪುಗೊಂಡಿರುವುದರಿಂದ, ಹಾಗೂ ಮಣಿಪಾಲ್ ನಗರವು ಶೈಕ್ಷಣಿಕವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದು, ಅಲ್ಲಿ ಲಕ್ಷಾಂತರ ಮಂದಿ ದೇಶೀಯ ಹಾಗೂ ವಿದೇಶಿಯ ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದು ಅವರಿಗೆ ಹಾಗೂ ಪ್ರವಾಸಿಗರಿಗೆ ಉತ್ತಮ ಸಂಪರ್ಕ ಕೊಂಡಿಯಾಗಿ ಈ ರಸ್ತೆಯು ಬಜ್ಪೆ ವಿಮಾನ ನಿಲ್ದಾಣಕ್ಕೆ **(Domestic/International Airport)** ಸಂಪರ್ಕ ಒದಗಿಸಿಕೊಡುತ್ತದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಯಾಗಿ ಬೇರ್ಪಡಿಸಿದಾಗಿನಿಂದ, ಅಧಿಕ ಪ್ರಗತಿಯನ್ನು ಉಡುಪಿ ನಗರವು ಕೈಗಾರಿಕಾ ಕ್ಷೇತ್ರದಲ್ಲಿ ಹೊಂದಿರುತ್ತದೆ. ಕೆಲವೊಂದು ಪ್ರಮುಖ ಉದ್ದಿಮೆಗಳಾದ ಮಾಹಿತಿ ತಂತ್ರಜ್ಞಾನ, ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಇತರ ಉದ್ದಿಮೆಗಳು ಹಾಗೂ ಪ್ರವಾಸೋದ್ಯಮ ಕೇಂದ್ರಗಳು ಸಾಕಷ್ಟು ಇರುವ ಹಾಗೂ ಶೈಕ್ಷಣಿಕವಾಗಿ ಅತೀ ಮುಂದುವರಿದಿರುವ ಉಡುಪಿ ಜಿಲ್ಲೆಗೆ ಪ್ರತ್ಯೇಕ ವಿಮಾನ ನಿಲ್ದಾಣವನ್ನು ಮಾಡುವ ಸಾಧ್ಯತೆಗೆ ಅವಕಾಶವಿಲ್ಲ. ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣವೊಂದೇ ಅವಕಾಶ ಒದಗಿಸುತ್ತಿದ್ದು, ಇದರ ಸಂಪರ್ಕಕ್ಕಾಗಿ ಅನಿವಾರ್ಯವಾಗಿ ಚತುಷ್ಪಥ ರಸ್ತೆಯನ್ನು ಒದಗಿಸಬೇಕಾಗುತ್ತದೆ.

ಈ ಎಲ್ಲಾ ಅವಶ್ಯಕತೆಗಳ ಹಿನ್ನಲೆಯಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಅಂದಾಜು ಸುಮಾರು ರೂ. 580=00 ಕೋಟಿ ವೆಚ್ಚದ ಅತ್ರಾಡಿ ರಾಜ್ಯ ಹೆದ್ದಾರಿ–67ನ್ನು ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಉಡುಪಿ ಜಿಲ್ಲೆಯ ಅತ್ರಾಡಿಯವರೆಗೆ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸು ಯೋಜನೆಗೆ ಸಂಬಂಧಿಸಿದಂತೆ ಶಕ್ಯತಾ ವರದಿಯನ್ನು ತಯಾರಿಸಿ ದಿನಾಂಕ: 23.02.2012ರಂದು ಸರ್ಕಾರಕ್ಕೆ ಸಲ್ಲಿಸಲಾಯಿತು.

## ಯೋಜನೆಯ ಮುಖ್ಯ ಉದ್ದೇಶಗಳು:

1. ಪ್ರಸ್ತಾವಿತ ಯೋಜನೆಯು ಸಾಕಾರಗೊಂಡಲ್ಲಿ ಮಂಗಳೂರು–ಬಜ್ಪೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮಣಿಪಾಲದವರೆಗೆ ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ (ಸುಮಾರು 45 ನಿಮಿಷಗಳ ಕಾಲಾವಧಿಯಲ್ಲಿ ಸಂಚರಿಸುವುದು) (ಬಜ್ಪೆ, ಪೆರ್ಮುದೆ, ಕಟೀಲು, ದಾಮಸ್‌ಕಟ್ಟೆ, ಸಂಕಲಕರಿಯ, ಮುಂಡ್ಕೂರು, ಬೆಳ್ಮಣ್, ಶಿರ್ವ ಹಾಗೂ ಮೂಡುಬೆಳ್ಳೆಯ ಮೂಲಕ ರಸ್ತೆಯು ಹಾದು ಹೋಗುವುದು)
2. ದಕ್ಷಿಣ ಕನ್ನಡ ಹಾಗೂ ಉಡುಪಿ ನಗರವಾಸಿಗಳಿಗೆ ಉತ್ತಮವಾದ ರಸ್ತೆ ಸಂಪರ್ಕ ಒದಗಿಸುವುದು.
3. ರಾಷ್ಟ್ರೀಯ ಹೆದ್ದಾರಿಯ ಪೂರ್ವಭಾಗಕ್ಕೆ ಈ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿ ಪಡಿಸಿ ಟ್ರಾಫಿಕ್ ಒತ್ತಡವನ್ನು ಕಡಿಮೆಗೊಳಿಸಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು.
4. ಬಜ್ಪೆಯಿಂದ ಮಣಿಪಾಲದ ಮಧ್ಯೆ ಬರುವಂತಹ ಗ್ರಾಮಗಳ ಬೆಳವಣಿಗೆಗೆ ಪೂರಕವಾಗುವಂತೆ ಯೋಜನೆಯನ್ನು ರೂಪಿಸುವುದು.

5. ಪ್ರಯಾಣಿಕರ ಹಾಗೂ ರಸ್ತೆಯ ಇಕ್ಕೆಳಗಳಲ್ಲಿ ವಾಸಿಸುವ ನಿವಾಸಿಗಳ ಸುರಕ್ಷತೆ.
6. ಅತೀ ಕಡಿಮೆ ವೆಚ್ಚದಲ್ಲಿ ಕಾರ್ಯಸಾಧ್ಯವಾದ ಹಾಗೂ ಕಾರ್ಯಗತಗೊಳಿಸಬಹುದಾದ ಯೋಜನೆ.
7. ಬೈಪಾಸ್ ರಸ್ತೆಯನ್ನು ನಿರ್ಮಿಸುವ ಮೂಲಕ ಪ್ರಮುಖ ನಗರಗಳ ರಸ್ತೆಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡುವುದು.
8. ಎಷ್ಟು ಸಾಧ್ಯವು ಅಷ್ಟರ ಮಟ್ಟಿಗೆ ತಿರುವುಗಳನ್ನು ತಪ್ಪಿಸಿ ನೇರಗೊಳಿಸುವುದು.
9. ಪ್ರವಾಸೋದ್ಯಮಕ್ಕೆ ಉತ್ತೇಜನ (Temple Tourism, Education Tourism and Medical Tourism etc)

ಯೋಜನೆಯ ಮುಖ್ಯಾಂಶಗಳು:

1. **ಯೋಜನೆಗೆ ತಗಲುವ ವೆಚ್ಚ ರೂ. 580 ಕೋಟಿ**
2. **ಪ್ರಸ್ತುತ ರಸ್ತೆಯ ಒಟ್ಟು ಉದ್ದ 66.55 ಕಿ.ಮೀ**
3. **ಪ್ರಸ್ತಾವಿತ ರಸ್ತೆಯ ಒಟ್ಟು ಉದ್ದ 55.951 ಕಿ.ಮೀ**
4. **ಪ್ರಸ್ತುತ ಇರುವ ರಸ್ತೆಯ ಒಟ್ಟು ವಿಸ್ತೀರ್ಣ 136.72 ಎಕ್ರೆ**
5. **ಈ ಯೋಜನೆಗೆ ಬೇಕಾದ ಹೆಚ್ಚುವರಿ ಭೂಸ್ವಾಧೀನದ ಒಟ್ಟು ವಿಸ್ತೀರ್ಣ 298.53 ಎಕ್ರೆ**
6. **ಈ ಯೋಜನೆಯ ಭೂಸ್ವಾದೀನಕ್ಕೆ ಮೀಸಲಿರಿಸಿದ್ದ ಹಣದ ಮೊತ್ತ ರೂ. 275=00 ಕೋಟಿ.**
7. **ರಸ್ತೆಯು ಪೂರ್ಣಗೊಂಡಲ್ಲಿ ಆಗುವ ಪ್ರಸ್ತಾವಿತ ರಸ್ತೆಯ ಒಟ್ಟು ವಿಸ್ತೀರ್ಣ ಒಟ್ಟು 435.22 ಎಕ್ರೆ**
8. **ಪ್ರಸ್ತುತ ಇರುವ cross drainage ಗಳ ಒಟ್ಟು ಸಂಖ್ಯೆ 134**
9. **ಪ್ರಸ್ತಾವಿತ cross drainage ಗಳ ಒಟ್ಟು ಸಂಖ್ಯೆ 169**
10. **ಮುಚ್ಚಬೇಕಾದ ಬಾವಿಗಳ ಸಂಖ್ಯೆ: 150**
11. **ಪ್ರಸ್ತಾವಿತ ರಸ್ತೆಯಲ್ಲಿ ಕೆಡವಬೇಕಾದ ಕಟ್ಟಡಗಳ ಒಟ್ಟು ಸಂಖ್ಯೆ 810**
12. **ಟೆಲಿಪೋನ್ ಮತ್ತು ವಿದ್ಯುತ್ ಕಂಬದ ಸ್ಥಳಾಂತರದ ಒಟ್ಟು ಸಂಖ್ಯೆ 2,412**
13. **ಕಡಿಯಬೇಕಾದ ಮರಗಳ ಒಟ್ಟು ಸಂಖ್ಯೆ 6132**
14. **ನೆಡಲು ಉದ್ದೇಶಿಸಿರುವ ಸಸಿಗಳ ಸಂಖ್ಯೆ: 6,132**
15. **ಪ್ರಸ್ತಾವಿತ flyover ಗಳ ಸಂಖ್ಯೆ 8**
16. **ಪ್ರಸ್ತಾವಿತ Bridge ಗಳ ಸಂಖ್ಯೆ 11**
17. **ಪ್ರಸ್ತಾವಿತ under pass ಗಳ ಸಂಖ್ಯೆ 11**
18. **bypass** ಗಳ ಸಂಖ್ಯೆ 14

## 2. ಮಂಗಳೂರು–ಕಾರವಾರ ಮೀನುಗಾರಿಕ ರಸ್ತೆಯನ್ನು ದ್ವಿ–ಪಥ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯ ಶಕ್ಯತಾ ವರದಿ ತಯಾರಿ:

(ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳ ಮೀನುಗಾರಿಕಾ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ–66ಕ್ಕೆ ಸಮನಾಂತರವಾಗಿ ಕಾಂಕ್ರೀಟ್ ರಸ್ತೆಗಳಾಗಿ ಅಭಿವೃದ್ಧಿ ಪಡಿಸುವ ಕುರಿತು)

### ಈ ಯೋಜನೆಯ ಪ್ರಾಮುಖ್ಯತೆ:–

ದ.ಕ.ಜಿಲ್ಲೆಯ ಮಂಗಳೂರು ತಾಲೂಕು, ಉಡುಪಿ ಜಿಲ್ಲೆಯ ಉಡುಪಿ ಹಾಗೂ ಕುಂದಾಪುರ ತಾಲೂಕು ಹಾಗೂ ಉತ್ತರಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ತಾಲೂಕುಗಳು ಪಶ್ಚಿಮ ತಟದಲ್ಲಿದ್ದು, ಕರಾವಳಿ ಪ್ರದೇಶದ ಅರಬ್ಬೀ ಸಮುದ್ರ ತೀರವನ್ನು ಒಳಗೊಂಡಿರುತ್ತದೆ. ಉತ್ತರ ಕನ್ನಡ ಜಿಲ್ಲೆಯು ಸುಮಾರು 150 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದೆ.

ಕರಾವಳಿ ಜಿಲ್ಲೆಗಳಲ್ಲಿ ಮುಂಗಾರಿನ ಮಳೆಗಾಲದಲ್ಲಿ ಪ್ರತಿ ವರ್ಷವು ನೆರೆ ಹಾವಳಿಗೆ ಒಳಗಾಗಿ ರಸ್ತೆಗಳು ತೀವ್ರತರ ಹಾನಿಗೀಡಾಗಿರುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಕರಾವಳಿ ಪ್ರದೇಶದ ಉದ್ದಕ್ಕೂ ಕಿರಿದಾದ ಮೀನುಗಾರಿಕಾ ರಸ್ತೆಯು ಇರುತ್ತದೆ. ಇದು ರಾಷ್ಟ್ರೀಯ ಹೆದ್ದಾರಿ–66ರ ಸಮನಾಂತರ ರಸ್ತೆಯಾಗಿ, ಕೆಲವು ಕಡೆಗೆ ಕೊಂಡಿ ರಸ್ತೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸದ್ಯ ಇರುವ ಕಿರಿದಾದ ಮೀನುಗಾರಿಕಾ ರಸ್ತೆಯು ಪ್ರತಿ ಮಳೆಗಾಲದಲ್ಲಿಯೂ ನೆರೆಹಾವಳಿಯಿಂದ ತೀವ್ರತರವಾಗಿ ಹದಗೆಡುವುದರಿಂದ, ಅದನ್ನು ಉಪಯೋಗಿಸುತ್ತಿರುವ ಮೀನುಗಾರ ಕುಟುಂಬಗಳು ಹಾಗೂ ಗ್ರಾಮದ ಇತರ ಜನರು ಸಾಕಷ್ಟು ಕಷ್ಟ ಅನುಭವಿಸುತ್ತಿದ್ದಾರೆ.

ಈ ಎಲ್ಲಾ ಅವಶ್ಯಕತೆಗಳ ಹಿನ್ನಲೆಯಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಅಂದಾಜು ಸುಮಾರು ರೂ. 780.00 ಕೋಟಿ ವೆಚ್ಚದಲ್ಲಿ (ಸುಮಾರು 387 ಕಿ.ಮೀ ಉದ್ದ) ಮಂಗಳೂರು–ಕಾರವಾರ ಮೀನುಗಾರಿಕಾ ರಸ್ತೆಯನ್ನು ಮಂಗಳೂರಿನ ತಲಪಾಡಿ ಗಡಿಯಿಂದ ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯವರೆಗೆ ದ್ವಿ–ಪಥ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯ ಸಂಪೂರ್ಣ ಶಕ್ಯತಾ ವರದಿಯನ್ನು ತಯಾರಿಸಿ ದಿನಾಂಕ: 03.08.2012ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಪ್ರಾಮುಖ್ಯವಾಗಿ ಈ ಕೆಳಗಿನ ಚಿಂತನೆಗಳ ನೆಲೆಯಲ್ಲಿ ಈ ಯೋಜನೆಯು ಮಹತ್ವವನ್ನು ಪಡೆದಿದೆ.

1. ರಾಷ್ಟ್ರದ ಭದ್ರತೆಯ ದೃಷ್ಠಿಯಿಂದಲೂ ಹಾಗೂ ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು (ಕರಾವಳಿ ತೀರದ ಜನರಿಗೆ) ಇದು ಸಹಕಾರಿಯಾಗುವುದು.
2. ಮೀನುಗಾರರಿಗೆ ಮೀನುಗಳನ್ನು ಕ್ಲಪ್ತ ಸಮಯದಲ್ಲಿ ಸಾಗಿಸಲು ಸಹಕಾರಿಯಾಗುವುದು.
3. ಈ ರಸ್ತೆಯ ನಿರ್ಮಾಣದಿಂದ ಬೀಚ್ ಪ್ರವಾಸೋದ್ಯಮ/ಮೀನುಗಾರಿಕೆ ಕರಾವಳಿ ಪ್ರದೇಶದಲ್ಲಿ ವಿಪುಲವಾಗಿ ಬೆಳೆಯಲು ಅವಕಾಶ ಕಲ್ಪಿಸುತ್ತದೆ.
4. ರಾಷ್ಟ್ರೀಯ ಹೆದ್ದಾರಿ–66ರ ವಾಹನ ದಟ್ಟಣೆಯನ್ನು ಕಡಿಮೆ ಮಾಡಬಹುದು.
5. ಈ ರಸ್ತೆ ಅಭಿವೃದ್ಧಿಯಿಂದ ಸ್ಥಳೀಯ ನಿವಾಸಿಗಳಿಗೆ ಮುಖ್ಯವಾಗಿ ಮೀನುಗಾರ ಕುಟುಂಬಗಳಿಗೆ ತುಂಬಾ ಅನುಕೂಲವಾಗುವುದು. ಮೀನುಗಾರ ಕುಟುಂಬಗಳು ವಾಸಿಸುವ ಗ್ರಾಮಗಳು ಮತ್ತು ರ.ಹೆ 66ರ ನಡುವೆ ಸಂಪರ್ಕಕೊಂಡಿಯಾಗುವುದು.
6. ಪ್ರತಿ ವರ್ಷ ನೆರೆಹಾವಳಿಯಿಂದ ದುರಸ್ಥಿಗೊಳಪಡುವ ರಸ್ತೆಗಳಿಗೆ ಶಾಶ್ವತವಾದ ಪರಿಹಾರವಾಗಿ ಈ ಯೋಜನೆ ರೂಪುಗೊಂಡಿದೆ.
7. ಬೇಗನೆ ಹಾಳಾಗುವ/ ಕೊಳೆತು ಹೋಗುವ ಮೀನುಗಳನ್ನು ಕಾಲ ವಿಳಂಬವಿಲ್ಲದೆ ಮೀನು ಮಾರುಕಟ್ಟೆಗೆ ಸಾಗಿಸಲು ಸಹಕಾರಿಯಾಗುವುದು.
8. ಬೀಚ್ ಪ್ರವಾಸೋದ್ಯಮಕ್ಕೆ ಉತ್ತೇಜನ.
9. ಅತೀ ಕಡಿಮೆ ವೆಚ್ಚದಲ್ಲಿ ಕಾರ್ಯಸಾಧ್ಯವಾದ ಹಾಗೂ ಕಾರ್ಯಗತಗೊಳಿಸಬಹುದಾದ ಯೋಜನೆ.

ಒಂದು ವೇಳೆ ಈ ರಸ್ತೆಯ ನಿರ್ಮಾಣವಾದಲ್ಲಿ ಕರ್ನಾಟಕದ ಕರಾವಳಿಯು ಭಾರತದ ಸ್ವರ್ಗವಾಗುವುದರಲ್ಲಿ ಸಂಶಯವಿಲ್ಲ. ಕರಾವಳಿ ತೀರ ಪ್ರದೇಶದಲ್ಲಿರುವ ಮೀನುಗಾರಿಕಾ ರಸ್ತೆಗಳು ತೀರ ದುಸ್ಥಿತಿಯಲ್ಲಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿರುತ್ತದೆ. ಆದ್ದರಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಮಾರ್ಗವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ತಲಪಾಡಿಯಿಂದ ಮಾಜಾಳಿಯವರೆಗೆ ದ್ವಿಪಥ ಮಾದರಿಯಲ್ಲಿ ರಸ್ತೆಯನ್ನು ಕಾಂಕ್ರೀಟಿಕರಣಗೊಳಿಸುವ ಯೋಜನೆಯ ವರದಿಯನ್ನು ತಯಾರಿಸಲಾಗಿದೆ. ಆ ಮೂಲಕ ಸುಗಮ ಸಂಚಾರಕ್ಕೆ ಈ ಯೋಜನೆ ನಾಂದಿಯಾಡಲಿದೆ.

ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕಾರವಾರದ ಚತುಷ್ಪದ ರಸ್ತೆ ಕಾಮಗಾರಿ ನಡೆಯುತ್ತಿದ್ದು ಬೃಹತ್ ಸೇತುವೆ ನಿರ್ಮಾಣಗೊಳ್ಳುತ್ತಿದೆ. ಆದ್ದರಿಂದ ಸದರಿ ಯೋಜನೆಯನ್ನು ತಯಾರಿಸುವಾಗ ನದಿ ತೀರದಲ್ಲಿ ಹಾದುಬರುವ ರಸ್ತೆಯನ್ನು ನೇರವಾಗಿ ಎನ್.ಎಚ್.66ಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಆ ಮೂಲಕ ಸುಮಾರು 400 ಕೋಟಿಗೂ ಮಿಗಿಲಾದ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಸುಮಾರು 18 ಸೇತುವೆಗಳನ್ನು ಮೊಟಕುಗೊಳಿಸಿ ಆರ್ಥಿಕ ಭಾರವನ್ನು ಕಡಿಮೆಗೊಳಿಸಿರುವುದು ಈ ಯೋಜನೆಯ ವಿಶೇಷತೆಯಾಗಿದೆ ಅಲ್ಲದೆ ಈ ರಸ್ತೆ ನಿರ್ಮಾಣವಾದಲ್ಲಿ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿಯನ್ನು ಕಾಣುವುದಲ್ಲದೆ. ಕರಾವಳಿ ಪ್ರದೇಶದ ಜನರಿಗೆ ಸೂಕ್ತ ರಕ್ಷಣೆಯನ್ನು ನೀಡಿದಂತಾಗುತ್ತದೆ.

- ಮಂಗಳೂರಿನ ತಲಪಾಡಿ ಗಡಿಯಿಂದ ಉಡುಪಿ ಜಿಲ್ಲೆಯ ಬೈಂದೂರ್‌ವರೆಗಿನ ಯೋಜನಾ ವೆಚ್ಚದ ಅಂದಾಜು ವಿವರಗಳು ಈ ಕೆಳಗಿನಂತಿದೆ.

| ತಾಲೂಕು | ಅಂದಾಜು ವೆಚ್ಚ (ಕೋಟಿಗಳಲ್ಲಿ) | ದೂರ (ಕಿ.ಮೀ) |
|---|---|---|
| ಮಂಗಳೂರು ತಾಲೂಕು | 200.00 | 62.89 |
| ಉಡುಪಿ ತಾಲೂಕು | 180.00 | 103.67 |
| ಕುಂದಾಪುರ ತಾಲೂಕು | 230.00 | 93.40 |
| | ----- | ----- |
| ಒಟ್ಟು | 610.00 | 259.96 |
| | | ----- |

- ಉಡುಪಿ ಜಿಲ್ಲೆಯ ಬೈಂದೂರ್‌ನಿಂದ ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯವರೆಗಿನ ಯೋಜನಾ ವೆಚ್ಚದ ಅಂದಾಜು ವಿವರಗಳು ಈ ಕೆಳಗಿನಂತಿದೆ

| ತಾಲೂಕು | ಅಂದಾಜು ವೆಚ್ಚ (ಕೋಟಿಗಳಲ್ಲಿ) | ದೂರ (ಕಿ.ಮೀ) |
|---|---|---|
| ಹೊನ್ನಾವರ | 31.72 | 32.78 |
| ಭಟ್ಕಳ | 42.36 | 26.82 |
| ಅಂಕೋಲಾ | 21.52 | 15.11 |
| ಕುಮಟಾ | 52.83 | 36.43 |
| ಕಾರವಾರ | 21.57 | 15.94 |
| | ----- | ----- |
| ಒಟ್ಟು | 170.00 | 127.08 |

## 3. ಕರಾವಳಿಯ ಮೂರು ಜಿಲ್ಲೆಗಳಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣ ಯೋಜನೆ

### ಸದರಿ ಯೋಜನೆಯ ಪ್ರಾಮುಖ್ಯತೆ:–

ಕರಾವಳಿ ಕರ್ನಾಟಕದ ಸುಮಾರು 20ಕ್ಕೂ ಹೆಚ್ಚು ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಸಾವಿರಾರು ಮಹಿಳಾ ಮೀನು ಮಾರಾಟಗಾರರು ತಲೆಹೊರೆಯಲ್ಲಿ ಮೀನುಗಳನ್ನು ಬುಟ್ಟಿಗಳಲ್ಲಿಟ್ಟು "ಮಾರುಕಟ್ಟೆ" ಎಂಬ ಪ್ರದೇಶದಲ್ಲಿ ಮೀನುಗಳನ್ನು ಮಾರಾಟ ಮಾಡುತ್ತಾರೆ. ಸದರಿ ಮೀನು ಮಾರುಕಟ್ಟೆಗಳಲ್ಲಿ ಹಲವು ತರದ ಸಮಸ್ಯೆಗಳಿಂದಲೂ, ನ್ಯೂನತೆಗಳಿಂದಲೂ ಕೂಡಿರುವ ದೃಶ್ಯ ಸಾಮಾನ್ಯವಾಗಿದೆ. ಮುಖ್ಯವಾಗಿ ಅಂತಹ ಮಾರುಕಟ್ಟೆಗಳು ನೈರ್ಮಲ್ಯದಕೊರತೆ, ಒಳಚರಂಡಿ ವ್ಯವಸ್ಥೆಯ ಕೊರತೆ, ಮಹಿಳೆಯರು ನೆಲದಲ್ಲೇ ಕುಳಿತು ಮೀನುಗಳನ್ನು ಮಾರಾಟ ಮಾಡುವ ದೃಶ್ಯ, ಮಹಿಳೆಯರಿಗೆ ಶೌಚಾಲಯದ ಕೊರತೆ, ನೀರಿನ ಸೌಲಭ್ಯ ಇಲ್ಲದಿರುವಿಕೆ, ವಿಶ್ರಾಂತಿ ಕೊಠಡಿ ಹಾಗೂ ಅವರು ಊಟ ಮಾಡಲು ಸರಿಯಾದ ಸ್ಥಳವಕಾಶದ ಕೊರತೆ ಮುಂತಾದ ಹಲವು ಸಮಸ್ಯೆಗಳ ಅಗರವಾಗಿ, ಈ ಮಾರುಕಟ್ಟೆಗಳು ಕಂಡು ಬರುತ್ತಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಮೀನು ಮಾರಾಟ ಮಾಡುವ ದುಸ್ಥಿತಿಯನ್ನು ಸರಿಪಡಿಸಬೇಕೆಂದು ಮತ್ತು ಆಧುನಿಕ ಮೀನು ಮಾರುಕಟ್ಟೆಗಳನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಬೇಕೆಂದು ದ.ಕ. ಪರಿಸರಾಸಕ್ತ ಒಕ್ಕೂಟ ದಿನಾಂಕ: 14.02.2009ರಂದು ಮಾನ್ಯ ಅಧ್ಯಕ್ಷರು, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಒಂದು ಮನವಿಯನ್ನು ಸಲ್ಲಿಸಿರುತ್ತಾರೆ.

ದ.ಕ ಪರಿಸರಾಸಕ್ತ ಒಕ್ಕೂಟವು ತನ್ನ ಮನವಿ ಪತ್ರದಲ್ಲಿ ಮಹಿಳಾ ಮೀನು ಮಾರಾಟಗಾರರು ಪ್ರಚಲಿತ ಮಲೇರಿಯಾ, ಚಿಕನ್‌ಗುನ್ಯಾಗಳಂತಹ ರೋಗ ರುಜಿನಗಳಿಂದ ನರಳುತ್ತಿದ್ದು, ಅವರು ತಮ್ಮ ಆದಾಯದ ಶೇಕಡಾ 20 ರಿಂದ 30ರಷ್ಟು ವೈದ್ಯಕೀಯ ಚಿಕಿತ್ಸೆಗಾಗಿ ಬಳಸಬೇಕಾಗಿದೆಯೆಂದು ಕೂಡಾ ತಿಳಿಸಿರುತ್ತಾರೆ.

ತದನಂತರ ಹಲವಾರು ಸಂಘಟನೆಗಳು ಉದಾ: ಅಂಜನೇಯ ಸ್ವ–ಸಹಾಯ ಸಂಘ, ಸುರಕಟ್ಟೆ, ಮಹಾಲಕ್ಷ್ಮೀ ಸ್ವ–ಸಹಾಯ ಸಂಘ, ಹೊನ್ನಾವರ, ಶ್ರೀ ಸುಬ್ರಹ್ಮಣ್ಯ ಸ್ವ–ಸಹಾಯ ಸಂಘ, ತನ್ಮಡ್ಗೆ, ಉತ್ತರಕನ್ನಡ, ಶ್ರೀ ಮಾರುತಿ ಸ್ವ–ಸಹಾಯ ಸಂಘ, ತನ್ಮಡಗಿ ಇವರುಗಳು ಕೂಡಾ ತಮ್ಮ ಮನವಿಯಲ್ಲಿ ನವೀನ ರೀತಿಯ ಮಾರುಕಟ್ಟೆಗಳನ್ನು ಆದಷ್ಟು ಬೇಗ ಸರಕಾರವು ಕೈಗೆತ್ತಿಕೊಳ್ಳಲು ಆದ್ಯತೆಯ ಮೇಲೆ ಯೋಜನೆಗಳನ್ನು ರೂಪಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಸದರಿ ಮನವಿಗೆ ಅನುಗುಣವಾಗಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ದಿನಾಂಕ: 02.01.2010ರಂದು ನಡೆದ ಮಹಾಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಯಿತು. ಮತ್ತು ಈ ಬಗ್ಗೆ ಶಕ್ಯತಾ ವರದಿಗೆ ಪೂರಕವಾಗಿ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು ಹಾಗೂ ಕರಾವಳಿ ತೀರದಲ್ಲಿ ಮಹಿಳಾ ಮೀನು ಮಾರಾಟಗಾರು ಮಾರಾಟ ಸ್ಥಳಗಳಲ್ಲಿ ಪಡುತ್ತಿರುವ ಬವಣೆಗಳನ್ನು ಹೋಗಲಾಡಿಸಲು ಕ್ರಮಕೈಗೊಳ್ಳುವುದು ಅವಶ್ಯವೆಂದು ಅಭಿಪ್ರಾಯ ಪಡಲಾಯಿತು.

ಈ ದಿಸೆಯಲ್ಲಿ ಕರಾವಳಿ ಜಿಲ್ಲೆಯಲ್ಲಿ ಪ್ರಸ್ತುತ ಇರುವ ಮೀನು ಮಾರುಕಟ್ಟೆಗಳನ್ನು ಸುಧಾರಿಸದಿದ್ದರೆ, ಮುದೊಂದು ದಿನ ಈ ಭಾಗದ ಮಹಿಳಾ ಮೀನು ಮಾರಾಟಗಾರರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಗಬಹುದೆಂಬ ವಿಚಾರವನ್ನು ತಜ್ಞರು ಪ್ರಾಧಿಕಾರದ ಮುಂದಿಟ್ಟರು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದ ಪ್ರಾಧಿಕಾರವು ಸುಸಜ್ಜಿತವಾದ ಮೀನು ಮಾರುಕಟ್ಟೆಯು ಹೇಗಿರಬೇಕೆಂಬುವುದನ್ನು ಅಧ್ಯಯನ ಮಾಡಿ ಒಂದು ಮೀನು ಮಾರುಕಟ್ಟೆಯ ಒಂದು ಮಾದರಿಯನ್ನು ತಯಾರಿಸಲಾಯಿತು.

<u>**ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಹಿಳಾ ಮೀನು ಮಾರುಕಟ್ಟೆಯ ಮಾದರಿಯ ಚಿತ್ರ**</u>




## ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ರೂಪಿಸಿರುವ ಮೀನು ಮಾರುಕಟ್ಟೆಗಳಲ್ಲಿ ಒದಗಿಸಿರುವ ವಿಶೇಷ ಸವಲತ್ತುಗಳು ಈ ಕೆಳಗಿನಂತಿದೆ.

1. ಈ ಸುಸಜ್ಜಿತವಾದ ಮೀನು ಮಾರುಕಟ್ಟೆಯಲ್ಲಿ ಸ್ಥಳಾವಕಾಶ, ನೀರು ಹಾಗೂ ಬೆಳಕಿನ ವ್ಯವಸ್ಥೆ ಇದ್ದು ನೈರ್ಮಲ್ಯಕ್ಕೆ ಪ್ರಥಮ ಆದ್ಯತೆ ನೀಡಲಾಗಿದೆ. ಪ್ರತಿಯೊಂದು ಮಹಿಳಾ ಮೀನು ಮಾರಾಟಗಾರರಿಗೆ ಒಂದೊಂದು ಮೀನು ಮಾರಾಟ ಕಿಂಡಿಗಳನ್ನು ಸ್ಥಾಪಿಸಿ ಅಲ್ಲಿ ಅವರಿಗೆ ಕುಳಿತುಕೊಳ್ಳಲು ಬೇಕಾದ ಆಸನಗಳು, ಮೀನು ಬುಟ್ಟಿಗಳನ್ನು ಇಡಲು ಸ್ಥಳಾವಕಾಶವನ್ನು (**Outlet**) ಪ್ರತಿಯೊಬ್ಬರಿಗೂ ಮಾಡಿಕೊಡಲಾಗುವುದು.

2. ಒಳಚರಂಡಿ ಮತ್ತು ಮಾರಾಟ ಕಿಂಡಿಗೆ ನೇರ ಸಂಪರ್ಕ ಒದಗಿಸುವ ಮೂಲಕ ಯಾವುದೇ ತ್ಯಾಜ್ಯ ವಸ್ತುಗಳಿಂದ ನೈರ್ಮಲ್ಯ ಕೆಡದಂತೆ ನೋಡಿಕೊಳ್ಳಲಾಗಿದೆ.

3. ಮಹಿಳಾ ಮೀನು ಮಾರಾಟಗಾರರಿಗೆ ಬೇಕಾಗುವ ಸಾಕಷ್ಟು ಶೌಚಲಾಯದ ನಿರ್ಮಾಣ.

4. ಅವರಿಗೆ ವಿಶ್ರಾಂತಿ ಕೊಠಡಿ ಹಾಗೂ ಸ್ನಾನಗೃಹದ ನಿರ್ಮಾಣ.

5. ಈ ಸುಸಜ್ಜಿತ ಮೀನು ಮಾರುಕಟ್ಟೆಯಲ್ಲಿ ಮೀನುಗಳನ್ನು ಗ್ರಾಹಕರಿಗೆ ಪ್ರದರ್ಶಿಸಲು ಪಾಲಿಶ್ ಮಾಡಿದ ಉತ್ತಮ ಗುಣಮಟ್ಟದ ಗ್ರಾನೈಟ್ ಸ್ಲಾಬ್‌ಗಳನ್ನು ಅಳವಡಿಸಿ, ಕುಳಿತುಕೊಳ್ಳಲು ಆಸನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

6. ಈ ಮೀನು ಮಾರುಕಟ್ಟೆಯ ಎಲ್ಲಾ ಮೀನು ಮಾರಾಟಗಾರರಿಗೆ ಸುಮಾರು 60 ಕೆ.ಜಿಯಷ್ಟು ಮೀನು ಶೇಖರಿಸಲು ಶೀತಲ ಪೆಟ್ಟಿಗೆಗಳನ್ನು (Ice Box) ಒದಗಿಸಲಾಗುವುದು.

7. ಮಹಿಳಾ ಮೀನು ಮಾರಾಟಗಾರರಿಗೆ ಉದ್ಯೋಗ ನಿಪುಣತೆಯ ಬಗ್ಗೆ ವಿಶೇಷ ತರಬೇತಿ ಹಾಗೂ ಅವರ ಆರೋಗ್ಯ ಸಂರಕ್ಷಣೆಯ ಬಗ್ಗೆ ತರಬೇತಿ ನೀಡುವುದು.
8. ಮೀನು ಮಾರಾಟ ಕಟ್ಟಡಗಳಿಗೆ ಸೋಲಾರ್ ದೀಪಗಳನ್ನು ಅಳವಡಿಸುವುದು.

ಇಂದಿನ ಹೈಟೆಕ್ ಮಾರುಕಟ್ಟೆಗಳಿಂದ ತತ್ತರಿಸುತ್ತಿರುವ ಬಡ ಮಹಿಳಾ ಮೀನು ಮಾರಾಟಗಾರರಿಗೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ಮೂಲಕ ಸ್ಥಳೀಯ ಮೀನು ಮಾರಾಟಗಾರರಿಗೆ ಹೆಚ್ಚಿನ ಬೇಡಿಕೆ ಬರುವಂತೆ ನೋಡಿಕೊಳ್ಳಲಾಗುವುದು. ಅಲ್ಲದೇ ಈ ಯೋಜನೆಯು ಸ್ವಉದ್ಯೋಗದಲ್ಲಿ ತೊಡಗಿರುವ ಸ್ವಾವಲಂಬಿ ಮಹಿಳಾ ಮೀನು ಮಾರಾಟಗಾರರಿಗೆ ಶಾಶ್ವತವಾದ ಯೋಜನೆಯಾಗಿ ರೂಪುಗೊಂಡಿದೆ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ.

# ಯೋಜನೆ ಹಾಗೂ ಅನುದಾನ ವಿವರಗಳು

ಕೇಂದ್ರ ಸರಕಾರದ ಅಂಗಸಂಸ್ಥೆಯಾದ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ, ಹೈದರಾಬಾದ್‌ನಿಂದ 90% ಅನುದಾನ ಹಾಗೂ ರಾಜ್ಯ ಸರಕಾರದಿಂದ ಮೀನುಗಾರಿಕಾ ಇಲಾಖೆಯ ಮೂಲಕ ಉಳಿದ 10% ಅನುದಾನದ ನೆರವಿನೊಂದಿಗೆ ಈ ಯೋಜನೆಯು ಕಾರ್ಯಗತಗೊಳ್ಳುತ್ತಿದೆ.

## ಯೋಜನೆಯಡಿ ನಿರ್ಮಾಣವಾದ / ನಿರ್ಮಾಣವಾಗುತ್ತಿರುವ ಮೀನು ಮಾರುಕಟ್ಟೆಯ ವಿವರಗಳು:-

### 1. ಪಡುಬಿದ್ರಿ ಮೀನು ಮಾರುಕಟ್ಟೆ:-

ಉಡುಪಿ ಜಿಲ್ಲೆ ಹಾಗೂ ತಾಲೂಕಿನ ಪಡುಬಿದ್ರಿಯಲ್ಲಿ ನೂತನ ಮೀನು ಮಾರುಕಟ್ಟೆಯ ಕಾಮಗಾರಿಯು ಸಂಪೂರ್ಣಗೊಂಡು ಈಗಾಗಲೇ ಪಡುಬಿದ್ರಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ.

### 2. ಅಂಕೋಲಾ ಮೀನು ಮಾರುಕಟ್ಟೆ:-

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅಂಕೋಲಾ ಮೀನು ಮಾರುಕಟ್ಟೆಯ ಪುನರ್‌ನಿರ್ಮಾಣ ಕಾಮಗಾರಿಯು ಮುಕ್ತಾಯಗೊಂಡು ಈಗಾಗಲೇ ಅಂಕೋಲಾ ಪಟ್ಟಣ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ.

### 3. ಯಡ್ತರೇ-ಬೈಂದೂರ್ ಮೀನು ಮಾರುಕಟ್ಟೆ:-

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮಹಿಳಾ ಮೀನು ಮಾರುಕಟ್ಟೆಯ ನಿರ್ಮಾಣ ಕಾಮಗಾರಿಯು ಮುಕ್ತಾಯಗೊಂಡು ಈಗಾಗಲೇ ಯಡ್ತರೇ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ.

### 4. ಕುಂದಾಪುರ- ಉಪ್ಪುಂದ ಮೀನು ಮಾರುಕಟ್ಟೆ:-

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಉಪ್ಪುಂದ ಮೀನು ಮಾರುಕಟ್ಟೆಯ ಕಾಮಗಾರಿಯು ಮುಕ್ತಾಯಗೊಂಡಿದ್ದು ಫಲಾನುಭವಿಗಳ ಉಪಯೋಗಕ್ಕೆ ಒದಗಿಸಲಾಗಿದೆ.

## 5. ಕಟಪಾಡಿ ಮೀನು ಮಾರುಕಟ್ಟೆ:

ಉಡುಪಿ ಜಿಲ್ಲೆ ಹಾಗೂ ತಾಲೂಕಿನ ಕಟಪಾಡಿ ಮೀನು ಮಾರುಕಟ್ಟೆಯ ಕಾಮಗಾರಿಯು ಮುಕ್ತಾಯಗೊಂಡು ಉದ್ಘಾಟನೆಗೊಂಡಿದ್ದು ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ.

## 6. ಕಿನ್ನಿಗೋಳಿ ಮೀನು ಮಾರುಕಟ್ಟೆ:

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಕಿನ್ನಿಗೋಳಿ ಮೀನು ಮಾರುಕಟ್ಟೆಯ ಕಾಮಗಾರಿಯು ಮುಕ್ತಾಯಗೊಂಡು ಫಲಾನುಭವಿಗಳ ಉಪಯೋಗಕ್ಕೆ ಒದಗಿಸಲಾಗಿದೆ.

## 7. ಶಿರಾಲಿ ಮೀನು ಮಾರುಕಟ್ಟೆ:

ಉತ್ತರ ಕನ್ನಡ ಜಿಲ್ಲೆಯ ಶಿರಾಲಿ ಮೀನು ಮಾರುಕಟ್ಟೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಸ್ಥಳೀಯ ಗ್ರಾಮ ಪಂಚಾಯತ್‌ಗೆ ಮೀನು ಮಾರುಕಟ್ಟೆ ಕಟ್ಟಡವನ್ನು ಹಸ್ತಾಂತರಿಸಲಾಗಿದೆ.

## 8. ಉಡುಪಿ (ನಗರ) ಮೀನು ಮಾರುಕಟ್ಟೆ:

ಉಡುಪಿ ಜಿಲ್ಲೆಯ ಉಡುಪಿ (ನಗರ) ಮೀನು ಮಾರುಕಟ್ಟೆಯ ಕಾಮಗಾರಿಯು ಪ್ರಗತಿಯಲ್ಲಿದ್ದು, ಕ್ಲಪ್ತ ಸಮಯದ ಒಳಗೆ ಮೀನು ಮಾರುಕಟ್ಟೆ ಕಟ್ಟಡದ ಕಾಮಗಾರಿಯನ್ನು ಸಂಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

## 9. ಪಾಣೆಮಂಗಳೂರು ಮೀನು ಮಾರುಕಟ್ಟೆ:

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಬಂಟ್ವಾಳ ಪುರಸಭಾ ವ್ಯಾಪ್ತಿಯ ಪಾಣೆಮಂಗಳೂರಿನಲ್ಲಿ ಮೀನು ಮಾರುಕಟ್ಟೆ ಕಟ್ಟಡದ ಕಾಮಗಾರಿಯು ದ.ಕ ಜಿಲ್ಲಾ ನಿರ್ಮಿತಿ ಕೇಂದ್ರದ ಮೂಲಕ ಪ್ರಗತಿಯಲ್ಲಿದೆ.

.

## 10.ಕೋಟ ಮೀನು ಮಾರುಕಟ್ಟೆ:

ಉಡುಪಿ ಜಿಲ್ಲೆಯ ಕೋಟ ಎಂಬಲ್ಲಿ ಅಂದಾಜು ವೆಚ್ಚ ರೂ 71.57 ಲಕ್ಷದಲ್ಲಿ ಸುಸಜ್ಜಿತ ಮಹಿಳಾ ಮೀನು ಮಾರುಕಟ್ಟೆ ನಿರ್ಮಾಣ ಯೋಜನೆಗೆ ಎನ್.ಎಫ್.ಡಿ.ಬಿಯಿಂದ ಅನುಮೋದನೆ ದೊರೆತಿದ್ದು, ಉಡುಪಿ ಜಿಲ್ಲಾ ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿಯು ಪ್ರಗತಿಯಲ್ಲಿದೆ.

## 11. ಶಿರ್ವ ಮೀನು ಮಾರುಕಟ್ಟೆ:

ಉಡುಪಿ ಜಿಲ್ಲೆಯ ಶಿರ್ವ ಎಂಬಲ್ಲಿ ಅಂದಾಜು ವೆಚ್ಚ ರೂ 81.25 ಲಕ್ಷದಲ್ಲಿ ಸುಸಜ್ಜಿತ ಮಹಿಳಾ ಮೀನು ಮಾರುಕಟ್ಟೆ ನಿರ್ಮಾಣ ಯೋಜನೆಗೆ ಎನ್.ಎಫ್.ಡಿ.ಬಿಯಿಂದ ಅನುಮೋದನೆ ದೊರೆತಿದ್ದು, ಉಡುಪಿ ಜಿಲ್ಲಾ ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿಯು ಪ್ರಗತಿಯಲ್ಲಿದೆ.

## 12.ಇತರೆ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟುವಿನಲ್ಲಿ ಅಂದಾಜು ರೂ. 68.25 ಲಕ್ಷ ವೆಚ್ಚದಲ್ಲಿ ಮೀನು ಮಾರುಕಟ್ಟೆ ನಿರ್ಮಾಣ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಈಗಾಗಲೇ ಮೀನುಗಾರಿಕಾ ಇಲಾಖೆಯ ಮೂಲಕ ಅನುಮೋದನೆಗಾಗಿ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಗೆ ಸಲ್ಲಿಸಲಾಗಿದೆ. ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿದೆ.

ಹಳೆಯ ಮೀನು ಮಾರುಕಟ್ಟೆ ಕಟ್ಟಡದಲ್ಲಿ ಫಲಾನುಭವಿಗಳಿಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ. ಪ್ರಸ್ತುತ ಈ ನೂತನ ಮೀನು ಮಾರುಕಟ್ಟೆ ಕಟ್ಟಡದಲ್ಲಿ ವಿಶ್ರಾಂತಿ ಗೃಹ, ಶೌಚಾಲಯ, ಸ್ನಾನಗೃಹ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಈ ಪೂರಕ ವಾತಾವರಣದಲ್ಲಿ ತೃಪ್ತಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಮೀನನ್ನು ಮಾರಾಟ ಮಾಡುತ್ತಿದ್ದು, ಆರ್ಥಿಕವಾಗಿ ತಮ್ಮ ವ್ಯಾಪಾರದಲ್ಲಿ ಈ ಹಿಂದಿಗಿಂತ ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದಾರೆ.

# 4. ಕರಾವಳಿಯ ಮೂರು ಜಿಲ್ಲೆಗಳಲ್ಲಿ ಕಾಲುಸಂಕ ನಿರ್ಮಾಣ:

ಕರ್ನಾಟಕದ ಕರಾವಳಿ ತೀರದ ಮೂರು ಜಿಲ್ಲೆಗಳಲ್ಲಿ ಜನರು ಎದುರುಸುತ್ತಿರುವ ಸಮಸ್ಯೆಯೆನೇಂದರೆ ಕಾಲುಸೇತುವೆಗಳ ಕೊರತೆ. ಕಾಲುಸೇತುವೆಗಳ ಕೊರತೆಯಿಂದಾಗಿ ನೈಸರ್ಗಿಕ ವಿಕೋಪಕ್ಕೆ ಉತ್ತರ ಕನ್ನಡ ಜಿಲ್ಲೆಯು ಹೆಚ್ಚು ಸಮಸ್ಯೆಗಳಿಗೆ ಒಳಗಾಗುತ್ತಿದೆ. ಇದಕ್ಕಾಗಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ದಿನಾಂಕ: 16.07.2010ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಗ್ರಾಮ ಮಟ್ಟದಲ್ಲಿ ಎಲ್ಲೆಲ್ಲಿ ಇಂತಹ ಕಾಲುಸೇತುವೆಗಳ ಅವಶ್ಯಕತೆ ಇದೆಯೆಂಬುವುದನ್ನು ಅಧ್ಯಯನ ಮಾಡಲು ಪ್ರಾಧಿಕಾರದ ಸದಸ್ಯರ ಹಾಗೂ ಕಾರ್ಯದರ್ಶಿಗಳ ನೇತೃತ್ವದಲ್ಲಿ ಅಧಿಕಾರಿಗಳ ತಂಡವು ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯಗಳನ್ನು ನಡೆಸಿತ್ತು.

ಜಿಲ್ಲಾ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗವು ಸಲ್ಲಿಸಿದ ಮಾಹಿತಿಯ ಆಧಾರದಲ್ಲಿ ಪ್ರಥಮ ಹಂತದಲ್ಲಿ ಅವಶ್ಯಕತೆಯ ನೆಲೆಯಲ್ಲಿ ಆಗಲೇ ಬೇಕಾದ ಮೂರು ಜಿಲ್ಲೆಗಳಿಗೆ ಸಂಬಂಧಿಸಿದ ಕಾಲುಸಂಕಗಳ ಪಟ್ಟಿಯನ್ನು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅನುದಾನದ ಬಿಡುಗಡೆಗಾಗಿ ಸರಕಾರಕ್ಕೆ ಸಲ್ಲಿಸಲಾಯಿತು. ಈ ಪ್ರಸ್ತಾವನೆಗೆ ಅನುಗುಣವಾಗಿ ಸರಕಾರವು ದಕ್ಷಿಣ ಕನ್ನಡ ಜಿಲ್ಲೆಗೆ 142 ಕಾಲುಸಂಕಗಳ ನಿರ್ಮಾಣಕ್ಕೆ ರೂ. 3.00 ಕೋಟಿ ಹಾಗೂ ಉಡುಪಿ ಜಿಲ್ಲೆಗೆ 45 ಕಾಲುಸಂಕಗಳ ನಿರ್ಮಾಣಕ್ಕೆ ರೂ.2.00 ಕೋಟಿ ಅನುದಾನವನ್ನು ಒಟ್ಟು ರೂ. 5.00 ಕೋಟಿ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದ್ದು, ಸಂಬಂಧಪಟ್ಟ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳ ಮೂಲಕ ಈ ಯೋಜನೆ ಕಾರ್ಯಗತಗೊಳ್ಳುತ್ತಿದೆ.

## ಕರಾವಳಿಯ ಮೂರು ಜಿಲ್ಲೆಗಳಲ್ಲಿ ತೂಗು ಸೇತುವೆ/ಸೇತುವೆಗಳ ನಿರ್ಮಾಣ ಯೋಜನೆ

- **ಬಡಬಾಗಿಲು ಎಂಬಲ್ಲಿ ತೂಗುಸೇತುವೆ ನಿರ್ಮಾಣ ಯೋಜನೆ**

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಹಾಡುವಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡಬಾಗಿಲು ಎಂಬಲ್ಲಿ ತೂಗುಸೇತುವೆ ನಿರ್ಮಾಣ ಯೋಜನೆಯ ರೂ. 37.00 ಲಕ್ಷ ಅಂದಾಜು ವೆಚ್ಚದ ಸಮಗ್ರ ಯೋಜನಾ ವರದಿಯನ್ನು ಪ್ರಾಧಿಕಾರವು ತಯಾರಿಸಿ ದಿನಾಂಕ: 05.01.2011ರಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನ ಬಿಡುಗಡೆಗೊಂಡು ಕಾಮಗಾರಿಯು ಪೂರ್ಣಗೊಂಡಿರುತ್ತದೆ,.

- **ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕುದ್ರುಗಿಯಲ್ಲಿ ಕಾಲುಸಂಕ ನಿರ್ಮಾಣ ಯೋಜನೆಯ ಪ್ರಾಥಮಿಕ ವರದಿ ತಯಾರಿಕೆ;**

ಅಂದಾಜು ವೆಚ್ಚ ಸುಮಾರು ರೂ. 1.78 ಕೋಟಿ ವೆಚ್ಚದಲ್ಲಿ ಹೊನ್ನಾವರ ತಾಲೂಕಿನ ಕುದ್ರಿಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ (ಕುದ್ರಿಗಿ ಗ್ರಾಮ ಪಂಚಾಯತ್ ಮತ್ತು ಉಪ್ಪುಣಿ ಗ್ರಾಮ ಪಂಚಾಯತ್‌ಗೆ ಸಂಪರ್ಕ ಕಲ್ಪಿಸುವ) ಶರಾವತಿ ನದಿಗೆ 250 ಮೀ ಉದ್ದ ಹಾಗೂ 1.20ಮೀ ಅಗಲವಿರುವ ತೂಗು ಸೇತುವೆ ನಿರ್ಮಾಣ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ದಿನಾಂಕ: 17.12.2012ರಂದು ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

**ಯೋಜನೆಯ ಉದ್ದೇಶ ಈ ಕೆಳಗಿನಂತಿದೆ;**

ಕುದ್ರಿಗಿ ಗ್ರಾಮವು ಅತೀ ಹಿಂದುಳಿದಿರುವ ಪ್ರದೇಶವಾಗಿದೆ. ಇಲ್ಲಿ ಜನರು ಅಭಿವೃದ್ಧಿಯನ್ನು ಆಧುನಿಕ ಸಮಾಜಕ್ಕೆ ಪೂರಕವಾಗಿ ಬೆಳೆಸಿಕೊಳ್ಳಬೇಕಾದರೆ ಸಾರಿಗೆ ಸಂಪರ್ಕದ ಅವಶ್ಯಕತೆ ತುಂಬಾ ಮಹತ್ವದ್ದಾಗಿರುತ್ತದೆ. ಆದುದರಿಂದ ಈ ತೂಗು ಸೇತುವೆ ನಿರ್ಮಾಣಕ್ಕೆ, ಗ್ರಾಮ ಪಂಚಾಯತ್ ಕುದ್ರಿಗಿ, ಇವರ ಮನವಿಯ ಮೇರೆಗೆ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಈಗಾಗಲೇ ಸರಕಾರಕ್ಕೆ ಸಲ್ಲಿಸಲಾಗಿದೆ.

- **ದಾಟಸಾಲ ಹೊಳೆಗೆ ಸೇತುವೆ ನಿರ್ಮಾಣ ಯೋಜನೆ**

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಚಿಕ್ಕನಗೋಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಹಿರೇಬೈಲ್ ಗ್ರಾಮದ ದಾಟಸಾಲ ಹೊಳೆಗೆ ಸೇತುವೆ ನಿರ್ಮಾಣ ಯೋಜನೆಯ ರೂ. 300.00 ಲಕ್ಷ ಅಂದಾಜು ವೆಚ್ಚದ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ದಿನಾಂಕ: 23.01.2012ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

- **ಮಣಿಹಳ್ಳಕ್ಕೆ ಕಾಲುಸಂಕ ನಿರ್ಮಾಣ ಯೋಜನೆ**

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪಂಜಿಕಲ್ಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಮೂಡುನಡುಗೋಡು ಗ್ರಾಮದಲ್ಲಿರುವ ಬಡಗುಂಡಿ (ಮಣಿಹಳ್ಳ) ಎಂಬಲ್ಲಿರುವ ಹಳ್ಳಕ್ಕೆ ಕಾಲುಸಂಕ ನಿರ್ಮಾಣ ಯೋಜನೆಯ ಅಂದಾಜು ರೂ. 27.00 ಲಕ್ಷ ವೆಚ್ಚದಲ್ಲಿ ಸಮಗ್ರ

ಯೋಜನಾ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ದ.ಕ ಜಿಲ್ಲೆಗೆ ಬಿಡುಗಡೆಯಾದ ರೂ. 3.00 ಕೋಟಿ ಅನುದಾನದಲ್ಲಿ ಈ ಕಾಮಗಾರಿಯು ಒಳಗೊಂಡಿದ್ದು, ದ.ಕ ಜಿಲ್ಲಾ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಅನುದಾನ ಬಿಡುಗಡೆಗೊಂಡಿರುತ್ತದೆ.

- **ನೇತ್ರಾವತಿ ನದಿಗೆ ಕಾಲುಸಂಕ ನಿರ್ಮಾಣ ಯೋಜನೆ**

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ತಾಲೂಕಿನ ಬಂದಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಇಳಂತಿಲ–ಮೊಗ್ರು ಗ್ರಾಮದಲ್ಲಿರುವ ನೇತ್ರಾವತಿ ನದಿಗೆ ಅಂದಾಜು ರೂ. 149.00 ಲಕ್ಷ ವೆಚ್ಚದಲ್ಲಿ ಕಾಲುಸಂಕ ನಿರ್ಮಾಣ ಯೋಜನೆಯ ಸಮಗ್ರ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ದಿನಾಂಕ: 23.01.2012ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

- **ಮಂಗಳೂರು ತಾಲೂಕಿನ ಕುಪ್ಪೆಪದವು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮುತ್ತೂರು ಗ್ರಾಮದಲ್ಲಿ ಫಲ್ಗುಣಿ ನದಿಗೆ ಸೇತುವೆ ನಿರ್ಮಾಣ ಯೋಜನೆಯ ಪ್ರಾಥಮಿಕ ವರದಿ ತಯಾರಿ;**

ಅಂದಾಜು ವೆಚ್ಚ ಸ ರೂ. 90.00 ಲಕ್ಷ ವೆಚ್ಚದಲ್ಲಿ ಮಂಗಳೂರು ತಾಲೂಕಿನ ಕುಪ್ಪೆಪದವು ಗ್ರಾಮ ಪಂಚಾಯತ್ ವ್ಯಾಪ್ತಿಯ (ಕುಪ್ಪೆಪದವು ಗ್ರಾಮ ಪಂಚಾಯತ್ ಮತ್ತು ಬಂಟ್ವಾಳ ತಾಲೂಕಿನ ಬಡಗ ಬೆಳ್ಳೂರು ಗ್ರಾಮ ಪಂಚಾಯತ್‌ಗೆ ಸಂಪರ್ಕ ಕಲ್ಪಿಸುವ) ಮುತ್ತೂರು ಗ್ರಾಮದಲ್ಲಿ ಫಲ್ಗುಣಿ ನದಿಗೆ 135 ಮೀ ಉದ್ದ ಹಾಗೂ 1.20ಮೀ ಅಗಲದ ತೂಗು ಸೇತುವೆ ನಿರ್ಮಾಣ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ದಿನಾಂಕ: 17.12.2012ರಂದು ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

**ಯೋಜನೆಯ ಉದ್ದೇಶ ಈ ಕೆಳಗಿನಂತಿದೆ;**

ಕುಪ್ಪೆಪದವು ಗ್ರಾಮ ಪಂಚಾಯತ್ ವ್ಯಾಪ್ತಿಯ ಮುತ್ತೂರು ಗ್ರಾಮದ ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬಳಿ ಫಲ್ಗುಣಿ ನದಿ ಹಾದುಹೋಗುತ್ತಿದ್ದು ಇದರಿಂದ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುವುದರಿಂದ ಹಾಗೂ ಸದ್ರಿ ಪ್ರದೇಶದಲ್ಲಿ ಸೇತುವೆ ಇಲ್ಲದಿರುವುದರಿಂದ ತೂಗು ಸೇತುವೆ ನಿರ್ಮಾಣಕ್ಕೆ ಅಧ್ಯಕ್ಷರು, ಬಡಗಬೆಳ್ಳೂರು ಗ್ರಾಮ ಪಂಚಾಯತ್‌ನವರ ಮನವಿಯ ಮೇರೆಗೆ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಈಗಾಗಲೇ ಸರಕಾರಕ್ಕೆ ಸಲ್ಲಿಸಲಾಗಿದೆ.

- **ಬೊಳ್ಮನಾರು ಎಂಬಲ್ಲಿ ಸೇತುವೆ ನಿರ್ಮಾಣ ಯೋಜನೆ**

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಪುದುವೆಟ್ಟು ಗ್ರಾಮದ ಬೊಳ್ಮನಾರು ಎಂಬಲ್ಲಿ ರೂ. 450.00 ಲಕ್ಷ ಅಂದಾಜು ವೆಚ್ಚದಲ್ಲಿ ಸೇತುವೆ ನಿರ್ಮಾಣ ಯೋಜನೆಯ ಸಮಗ್ರ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ದಿನಾಂಕ: 02.02.2013ರಂದು ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.

- **ಕಾಮಿನಿ ಹೊಳೆಗೆ ಸೇತುವೆ ನಿರ್ಮಾಣ ಯೋಜನೆ**

ಉಡುಪಿ ಜಿಲ್ಲೆಯ ಜಿಲ್ಲೆಯ ಉಡುಪಿ ತಾಲೂಕಿನ ಪಡುಬಿದ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ನಡ್ಸಾಲು ಕುದ್ರು ಎಂಬಲ್ಲಿ ಅಂದಾಜು ರೂ. 25.00 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಉಡುಪಿ ಜಿಲ್ಲೆಗೆ ಬಿಡುಗಡೆಯಾದ ರೂ. 2.00 ಕೋಟಿ ಅನುದಾನದಲ್ಲಿ ಈ ಕಾಮಗಾರಿಯು ಒಳಗೊಂಡಿದ್ದು, ಉಡುಪಿ ಜಿಲ್ಲಾ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಅನುದಾನ ಬಿಡುಗಡೆಗೊಂಡಿರುತ್ತದೆ.

- **ಮಡಿಸಾಲು ಹೊಳೆಗೆ ಸೇತುವೆ ನಿರ್ಮಾಣ ಯೋಜನೆ**

ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಕುಂಜಾಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಆರೂರು–ಬೆಳ್ಮಾರು ನಡುವೆ ಮಡಿಸಾಲು ಹೊಳೆಗೆ ಅಂದಾಜು ರೂ. 2.00 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ಪ್ರಾಧಿಕಾರವು ತಯಾರಿಸಿ ದಿನಾಂಕ: 19.10.2011ರಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಗೆ ಅನುದಾನ ಬಿಡುಗಡೆಗೊಂಡಿರುತ್ತದೆ.

## 5. <u>ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ:</u>

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಪ್ರತಿ ವರ್ಷ ಫೆಬ್ರವರಿಯಿಂದ ಜೂನ್ ತಿಂಗಳವರೆಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತಿದ್ದು, ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಕೈಗೆತ್ತಿಕೊಂಡಲ್ಲಿ ವರ್ಷಪೂರ್ತಿ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಮಾಡಬಹುದಾಗಿರುವುದರಿಂದ ಈ ಯೋಜನೆ ಬಹು ಅವಶ್ಯಕವಾಗಿರುತ್ತದೆ. ಬಹುಗ್ರಾಮ ಯೋಜನೆ ಮಂಜೂರಾಗುವ ಪೂರ್ವದಲ್ಲಿ P.S.R/D.P.R ಗಳನ್ನು ತಯಾರಿಸಬೇಕಾಗುತ್ತದೆ. ಆದುದರಿಂದ ವರ್ಷಪೂರ್ತಿ ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಅವಶ್ಯಕತೆಗಳಲ್ಲಿ ಬಹುಮುಖ್ಯವಾದ ಶುದ್ಧ ಕುಡಿಯವ ನೀರು ಪೂರೈಕೆ ಯೋಜನೆಯ P.S.R/D.P.R ಗಳನ್ನು ಪ್ರಥಮ ಹಂತದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ತಯಾರಿಸಲು (ಜಿಲ್ಲಾ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗವು ಕೈಗೆತ್ತಿಕೊಳ್ಳದಂತಹ ಯೋಜನೆಗಳ) ಸಂಬಂಧಿಸಿದ ಜಿಲ್ಲೆಗಳ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗವು ಸಲ್ಲಿಸಿದ ಪ್ರಸ್ತಾವನೆಗೆ ಅನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳಲಾಯಿತು.

ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ 25 ಗ್ರಾಮಗಳಿಗೆ ಮತ್ತು ಉಡುಪಿ ಜಿಲ್ಲೆಯ 26 ಗ್ರಾಮಗಳ ವ್ಯಾಪ್ತಿಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪಿ.ಎಸ್.ಆರ್‌ನ್ನು ತಯಾರಿಸಿ, ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ: 26.07.2013ರಂದು ಹಾಗೂ ದ.ಕ ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ: 29.07.2013ರಂದು ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ ಹಾಗೂ ಡಿ.ಪಿ.ಆರ್ ತಯಾರಿಕೆಗೆ ಅನುಮೋದನೆ ಕೋರಲಾಗಿತ್ತು. ಪ್ರಾಧಿಕಾರದ ಈ ಪ್ರಸ್ತಾವನೆಗೆ ಅನುಗುಣವಾಗಿ ಯೋಜನಾ ಇಲಾಖೆಯು ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಇದರ ಯೋಜನಾ ವೆಚ್ಚ, **Per Capita Expenditure** ಹಾಗೂ ಇತ್ಯಾದಿ ಮಾಹಿತಿಗಳನ್ನು ಆ ಇಲಾಖೆಯ ಗಮನಕ್ಕೆ ತಂದು ಮತ್ತು ಅವರ ಅಭಿಪ್ರಾಯ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲು ಅನುಮೋದಿಸಲಾಗಿದೆ. ಈ ಅನುಮೋದನೆಗೆ ಅನುಗುಣವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಈ ನಿಟ್ಟಿನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅಭಿಪ್ರಾಯವನ್ನು ನಿರೀಕ್ಷಿಸಲಾಗುತ್ತಿದೆ.

.